ಇಂದು ದಿನಾಂಕಃ 28.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

<u>ಪಾಟೀ ಸವಾಲುಃ</u> ವಾದಿಯ ಪರ ಶ್ರೀ. ಕೆ.ಬಿ.ಬಿ. ವಕೀಲರಿಂದಃ

1. ನಾಗವಂದ ಹಾಗೂ ತೋಟಗಂಟಿ ಗ್ರಾಮಕ್ಕೆ 13 ಕಿ.ಮೀ. ಅಂತರವಿದೆ. ನಾಗವಂದದಿಂದ ತೋಟಗಂಟಿ ಗ್ರಾಮಕ್ಕೆ ಹೋಗುವಾಗ 3 ಹಳ್ಳಿಗಳು ಬರುತ್ತವೆ, ಅವುಗಳೆಂದರೆ ತಡಕನಹಳ್ಳಿ , ಹಳಿಯಾಳ ಹಾಗೂ ಕಣವಿಸಿದ್ದಗೇರಿ. ಪ್ರತಿವಾದಿ 3 ರವರ ತಂದೆಯ ಹೆಸರು ಚಿಕ್ಕಪ್ಪ. ಸದರಿ ಚಿಕ್ಕಪ್ಪರವರ 3 ಅಣ್ಣತಮ್ಮಂದಿರು. ಅವರ ಹೆಸರು ಹನುಮಂತಪ್ಪ, ಶಿವಪ್ಪ ಹಾಗೂ ಚಿಕ್ಕಪ್ಪ. ಸದರಿ ಚಿಕ್ಕಪ್ಪರವರ ತಾಯಿಯ ಹೆಸರು ಕರಿಯಮ್ಮ.

2. ದಾವಾ ಆಸ್ತಿಯನ್ನು ನಾನು ನೋಡಿದ್ದು, ಅದು ತೋಟಗಂಟಿ ಗ್ರಾಮದಲ್ಲಿದೆ. ದಾವಾ ಆಸ್ತಿಯ ಚಕ್ಕಬಂದಿ ನನಗೆ ಗೊತ್ತಿಲ್ಲ. ತೋಟಗಂಟಿ ಗ್ರಾಮದಿಂದ 1.1/2 ಕಿ.ಮೀ. ಅಂತರದಲ್ಲಿ ಕಡೂರ ರಸ್ತೆಗೆ ದಾವಾ ಆಸ್ತಿ ಇರುತ್ತದೆ. ದಾವಾ ಆಸ್ತಿಯ ಸರ್ವೇ ನಂಬರಃ 21/3+4/ಬ. 3 ಎಕರೆ 35 ಗುಂಟೆ ಇದ್ದು, ಪ್ರತಿವಾದಿಯರಿಗೆ 2 ಎಕರೆ 35 ಗುಂಟೆ ಬರುತ್ತದೆ. ದಾವಾ ಆಸ್ತಿಯನ್ನು ಚಿಕ್ಕಪ್ಪನ ತಾಯಿ ಕರಿಯವ್ವ ತೆಗೆದುಕೊಂಡಿದ್ದು ಇರುತ್ತದೆ. ದಾವಾ ಆಸ್ತಿಯನ್ನು ಕರಿಯವ್ವ ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನಿಂಗಪ್ಪ ಖರೀದಿಸಿದ್ದು ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು 1966 ರಲ್ಲಿ ನಿಂಗಪ್ಪರವರ ರಾಮಚಂದ್ರಪ್ಪ ನಾಡಗೇರರವರಿಂದ ರೂ.1,500/-ಗಳಿಗೆ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

3. ಚಿಕ್ಕಪ್ಪ ತೋಟಗಂಟಿ ಗ್ರಾಮದಲ್ಲಿ ಪೋತಿಯಾಗಿರುತ್ತಾನೆ. ಸದರಿ ಚಿಕ್ಕಪ್ಪ ಹುಟ್ಟಿದಾಗಿನಿಂದ ತೋಟಗಂಟಿಯಲ್ಲಿ ವಾಸವಿದ್ದರು ಎಂದರೆ ಸರಿ. ಚಿಕ್ಕಪ್ಪನ ಹೆಂಡತಿ ನಾಗವಂದ ಗ್ರಾಮದವರು ಎಂದರೆ ಸರಿ. ಚಿಕ್ಕಪ್ಪರವರ ಮದುವೆ ಯಾವಾಗ ಆಗಿರುತ್ತದೆ ಎಂದು ನನಗೆ ನೆನಪಿಲ್ಲ. ಚಿಕ್ಕಪ್ಪರವರ ಹೆಂಡತಿ ಹೆಸರು ಬಸಮ್ಮ. ಸದರಿ ಬಸಮ್ಮ ಪೋತಿಯಾಗಿ 2-3 ವರ್ಷಗಳಾಗಿವೆ. ಚಿಕ್ಕಪ್ಪ ಹಾಗೂ ಬಸಮ್ಮ ಯಾವಾಗ ಬೇರೆಯಾಗಿರುತ್ತಾರೆ ಎಂದರೆ ಸಾಕ್ಷಿಯು ಅವರು ಬೇರೆಯಾಗಿಲ್ಲ, ಬಸಮ್ಮ ನಾಗವಂದದಲ್ಲಿಯೇ ಇದ್ದರು, ಚಿಕ್ಕಪ್ಪ ತೋಟಗಂಟಿ ಗ್ರಾಮದಲ್ಲಿ ಇದ್ದು, ಬಂದು ಹೋಗಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ದಾವಾ ಆಸ್ತಿ ಚಿಕ್ಕಪ್ಪ ಹಾಗೂ ಅವರ ಅಣ್ಣ ನಿಂಗಪ್ಪ ಖರೀದಿಸಿದ ಆಸ್ತಿ ಎಂದರೆ ಸರಿ. ಸದರಿ ಆಸ್ತಿಯನ್ನು ನಿಂಗಪ್ಪ, ಶಿವಪ್ಪ ಹಾಗೂ ಚಿಕ್ಕಪ್ಪ ಹಿಸ್ಸೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಮುಖ್ಯ ಸಾಕ್ಷ್ಯಪ್ರಮಾಣ ಪತ್ರಕ್ಕೆ ವಕೀಲರು ಮಾಹಿತಿ ನೀಡಿರುತ್ತಾರೆ.

4. ನಾನೇ ಮುಖ್ಯ ಸಾಕ್ಷ್ಯಪ್ರಮಾಣ ಪತ್ರ ಸಲ್ಲಿಸಿದ್ದು, ಯಾವ ಇಸವಿ ಎಂದು ನೆನಪಿಲ್ಲ, ಸುಮಾರು 18-19 ವರ್ಷಗಳ ಹಿಂದೆ ಹಾಕಿರುತ್ತೇನೆ. ಚಿಕ್ಕಪ್ಪ ಶಿವಪ್ಪರವರೊಂದಿಗೆ ಚಿಕ್ಕಪ್ಪ ಕಾಂತೇಶ ಎಂಬುವವರಿಗೆ ಮೃತ್ಯು ಮಾಡಿಕೊಟ್ಟಿರುತ್ತಾರೆ ಎಂದರೆ ಸುಳ್ಳು. ನಾನು ಮೃತ್ಯು ಪತ್ರವನ್ನು ನೋಡಿರುವುದಿಲ್ಲ. ದಾವಾ ಆಸ್ತಿಯ ಬಗ್ಗೆ ಈ ಹಿಂದೆ ಪ್ರಕರಣಗಳು ಆಗಿರುತ್ತವೆ. ಪ್ರತಿವಾದಿ 1 ರವರು ಸಕಲೇಶಪುರದಲ್ಲಿ ವಾಸವಾಗಿದ್ದರು, ಪೋತಿಯಾಗಿರುತ್ತಾರೆ. ಅವರ ಹೆಂಡತಿ ಮಕ್ಕಳು ಸಕಲೇಶಪುರದಲ್ಲೇ ಇರುತ್ತಾರೆ. 2 ನೇ ಪ್ರತಿವಾದಿ ನಾಗವಂದ ಗ್ರಾಮದಲ್ಲಿಯೇ ವಾಸವಾಗಿರುತ್ತಾರೆ. ಕುಬೇರಪ್ಪರವರ ಬೇರೆ ಊರಿನಲ್ಲಿದ್ದ, ಊರಿನ ಹೆಸರು ನನಗೆ ನೆನಪಿಲ್ಲ. ಪ್ರತಿವಾದಿ 4 ರವರು ಹುಬ್ಬಳ್ಳಿಯಲ್ಲಿ ವಾಸವಿರುತ್ತಾರೆ. ಪ್ರತಿವಾದಿ 6 ರವರು ನಾಗವಂದದಲ್ಲೇ ಇದ್ದು, ಪೋತಿಯಾಗಿರುತ್ತಾರೆ. ಪ್ರತಿವಾದಿ 6 ರವರು ಅವರ ತಾಯಿಯ ಪೋತಿಯ ನಂತರ ಪೋತಿಯಾಗಿರುತ್ತಾರೆ.

5. ಪ್ರತಿವಾದಿ 1 ರಿಂದ 3 ರವರು ದಾವಾ ಆಸ್ತಿಯನ್ನು ವಹಿವಾಟು ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಪ್ರತಿವಾದಿ 1 ರಿಂದ 3 ರವರು ವಹಿವಾಟು ಮಾಡಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಿಕ್ಕಪ್ಪರವರು ವಾದಿಯ ಹೆಸರಿಗೆ ಮೃತ್ಯು ಪತ್ರ ಬರೆದಿದ್ದು, ಪ್ರತಿವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ
Sd/-

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ., ಸಂಚಾರಿ
ನ್ಯಾಯಪೀಠ ರಟ್ಟೀಹಳ್ಳಿ .